# ಸಾಹಬ್‌ಜಾದೆ ಇರ್ಫಾನ್

ಚೀನಾ ದೇಶಕ್ಕೂ ಹಿಂದಿ ಭಾಷೆಗೂ ಎತ್ತಣಿಂದೆತ್ತ ಸಂಬಂಧವಯ್ಯ.. ಎಂದು ಇನ್ನು ಕೇಳುವಂತಿಲ್ಲ. ಚೀನಾದ ಜನರು ಇತ್ತೀಚೆಗೆ ಹಿಂದಿ ಸಿನಿಮಾಗಳನ್ನು ಅತ್ಯುತ್ಸಾಹದಿಂದ ನೋಡುತ್ತಿದ್ದಾರೆ! ಇರ್ಫಾನ್ ಖಾನ್ ಮನೋಜ್ಞ ಅಭಿನಯದ 'ಹಿಂದಿ ಮೀಡಿಯಂ' ಎನ್ನುವ ಸಿನಿಮಾ ಕಳೆದ ವಾರ ಚೀನಾದಲ್ಲಿ ಬಿಡುಗಡೆ ಕಂಡಿದ್ದು, ಮೊದಲ ದಿನವೇ 22.06 ಕೋಟಿ ರೂಪಾಯಿ (3.39 ದಶಲಕ್ಷ ಡಾಲರ್) ಕಲೆಕ್ಷನ್ ಗಳಿಸಿ ಎಲ್ಲರ ಹುಬ್ಬು ಮೇಲೇರಿಸಿದೆ. ಹುಬ್ಬು ಏಕೆ ಮೇಲೇರಿದೆಯೆಂದರೆ, ಈ ಸಿನಿಮಾ ನಿರ್ಮಾಣವಾದದ್ದೇ 23 ಕೋಟಿ ರೂಪಾಯಿ ವೆಚ್ಚದಲ್ಲಿ! ಭಾರತದಲ್ಲಿ ಇದು ಬಿಡುಗಡೆಯಾದ ಬಳಿಕ ಒಟ್ಟು 70 ಕೋಟಿ ರೂಪಾಯಿ ಕಲೆಕ್ಷನ್ ಗಳಿಸಿದ್ದು, ಈ ವರ್ಷದ ಅತ್ಯಂತ ಯಶಸ್ವಿ ಚಿತ್ರ ಎನ್ನಿಸಿಕೊಂಡಿದೆ.

ಚೀನಾದಲ್ಲಿ ಹಿಂದಿ ಚಿತ್ರಗಳು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಬಿಡುಗಡೆ ಕಾಣುತ್ತಿವೆ. ಚೀನೀಯರು ಇಂಗ್ಲಿಷ್ ಭಾಷೆಯ ಆಕ್ರಮಣದಿಂದ ಬಹುಮಟ್ಟಿಗೆ ಸಂತ್ರಸ್ತರಾದವರೇ. ಅವರಿಗೆ ಇಂಗ್ಲಿಷ್ ಉಚ್ಚಾರಣೆ ಅಷ್ಟು ಚೆನ್ನಾಗಿ ಬರುವುದಿಲ್ಲ; ಆದರೆ ಜಗತ್ತಿನ 'ಸೂಪರ್ ಪವರ್'ಗಳಲ್ಲಿ ಒಂದು ಎನ್ನಿಸಿಕೊಂಡಿರುವುದರಿಂದ ಇಂಗ್ಲಿಷ್ ಕೈಬಿಟ್ಟರೂ ಆಗುವುದಿಲ್ಲ. ಅದಕ್ಕೆಂದೇ ಅಲ್ಲಿ ಇಂಗ್ಲಿಷ್ ಮೀಡಿಯಂ ಶಾಲೆಗಳು ಹೆಚ್ಚಾಗಿವೆ. ಆ ಶಾಲೆಗಳಲ್ಲಿ ಊಟದ ಹೊತ್ತಿಗೆ ಮ್ಯಾಂಡರಿನ್ ಅಥವಾ ಚೈನೀಸ್ ಮಾತನಾಡಿದರೆ ವಿದ್ಯಾರ್ಥಿಗಳಿಗೆ ದಂಡ ವಿಧಿಸುವುದೂ ಇದೆ. 'ಹಿಂದಿ ಮೀಡಿಯಂ' ಚಿತ್ರ, ಭಾರತದಲ್ಲಿ ಇಂಗ್ಲಿಷ್ ಉಂಟು ಮಾಡಿರುವ ಹಾವಳಿಯನ್ನು ವ್ಯಂಗ್ಯವಾಗಿ ಹಾಗೂ ತಮಾಷೆಯಾಗಿ ಚಿತ್ರಿಸಿದೆ. ನಮಗಿಂತ ಹೆಚ್ಚಾಗಿ ಇಂಗ್ಲಿಷ್ ಸಂತ್ರಸ್ತರಾಗಿರುವ ಚೀನೀಯರು ಈ ಚಿತ್ರವನ್ನು ಮೆಚ್ಚುವುದು ಸಹಜವೇ.



ಈ ವರ್ಷದ ಆರಂಭದಲ್ಲಿ ಅಮೀರ್ ಖಾನ್‌ನ 'ಸೀಕ್ರೆಟ್ ಸೂಪರ್‌ಸ್ಟಾರ್' ಹಾಗೂ ಸಲ್ಮಾನ್ ಖಾನ್‌ನ 'ಭಜರಂಗಿ ಭಾಯಿಜಾನ್' ಸಿನಿಮಾಗಳು ಚೀನಾದಲ್ಲಿ ಬಿಡುಗಡೆ ಕಂಡು ಯಶಸ್ವಿಯಾಗಿದ್ದವು. ಕಳೆದ ವರ್ಷ ಅಮೀರ್‌ಖಾನ್‌ನ 'ದಂಗಲ್' ಅಲ್ಲಿ ಭಾರೀ ಕಲೆಕ್ಷನ್ ನಡೆಸಿ ದಾಖಲೆ ನಿರ್ಮಿಸಿತ್ತು. ಇದೀಗ ಸೂಪರ್‌ಸ್ಟಾರ್ ಖಾನ್‌ದ್ವಯರ ಸಾಲಿಗೆ ಇರ್ಫಾನ್ ಕೂಡಾ ಸೇರಿದಂತಾಗಿದೆ.

ಬಾಲಿವುಡ್‌ನಲ್ಲಿ ಇರ್ಫಾನ್ ಖಾನ್ ಇವತ್ತು ಅತ್ಯಂತ ಜನಪ್ರಿಯ ನಟ. ಕಮರ್ಷಿಯಲ್ ಮತ್ತು ಕಲಾತ್ಮಕ ಎಂಬ ಬೇಧವಿಲ್ಲದೆ ಎರಡೂ ರೀತಿಯ ಚಿತ್ರಗಳಲ್ಲಿ ಈತ ಯಶಸ್ವಿಯಾಗಿದ್ದಾನೆ. ಅದಕ್ಕೆ ಕಾರಣ ರಂಗಭೂಮಿಯ ಹಿನ್ನೆಲೆ ಎನ್ನುವವರಿದ್ದಾರೆ. ಕೆಲವು ವರ್ಷಗಳ ಹಿಂದೆ ನಾನಾ ಪಾಟೇಕರ್ ಈ ಮಾದರಿಯ ಯಶಸ್ಸು ಗಳಿಸಿದ್ದುಂಟು. ಅಂದಿನ ಕಮರ್ಷಿಯಲ್ ಜನಪ್ರಿಯ ತಾರೆಯರ ಚಿತ್ರಗಳಿಗೂ ನಾನಾ ಪಾಟೇಕರ್ ಚಿತ್ರಗಳು ಪೈಪೋಟಿ ನೀಡಿದ್ದವು. ಹಾಗೆಯೇ ಇವತ್ತು ಇರ್ಫಾನ್ ಬೆಳೆದು ನಿಂತಿದ್ದಾನೆ. ದೀಪಿಕಾ ಸಹಿತ ಬಾಲಿವುಡ್ ಖ್ಯಾತನಾಮ ನಟಿಯರೆಲ್ಲ ಇರ್ಫಾನ್ ಚಿತ್ರಗಳಲ್ಲಿ ಅಭಿನಯಿಸಲು ತುದಿಗಾಲಲ್ಲಿ ನಿಂತಿರುತ್ತಾರೆ. ಈ ವಾರ ಈತ ನಟಿಸಿರುವ 'ಬ್ಲ್ಯಾಕ್‌ಮೇಲ್' ಚಿತ್ರವೂ ಬಿಡುಗಡೆಯಾಗಿದ್ದು ವಿಮರ್ಶಕರ ಮೆಚ್ಚುಗೆ ಗಳಿಸಿದೆ.

ಸದ್ಯಕ್ಕೆ ಇರ್ಫಾನ್ ಖಾನ್ ಅಪರೂಪದ ಕಾಯಿಲೆಯೊಂದರ ಚಿಕಿತ್ಸೆಗಾಗಿ ವಿದೇಶದಲ್ಲಿದ್ದಾನೆ. ಎನ್‌ಇಟಿ ಎನ್ನುವುದು ಈ ಕಾಯಿಲೆಯ ಹೆಸರು. ಇದೊಂದು ಸಣ್ಣ ಗಡ್ಡೆ. ಕ್ಯಾನ್ಸರ್‌ಗೆ ಕಾರಣವಾಗಲೂಬಹುದು, ಆಗದಿರಲೂ ಬಹುದು. ಆದರೆ ಅಪಾಯಕಾರಿಯಲ್ಲ. ಏಕೆಂದರೆ ಇದು ಸುಲಭವಾಗಿ ಮತ್ತು ವೇಗವಾಗಿ ದೇಹದ ಇತರ ಭಾಗಗಳಿಗೆ ಹರಡುವುದಿಲ್ಲ. ಅಪರೂಪದ್ದು ಏಕೆಂದರೆ, ಇದು ಬಹಳ ಕಡಿಮೆ ಜನರಿಗೆ ಬರುವಂತಹದ್ದು. ಮುಂಬೈಯ ಟಾಟಾ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರತಿ ವರ್ಷ ಸರಾಸರಿ 65 ಸಾವಿರ ಜನರು ಕ್ಯಾನ್ಸರ್ ಚಿಕಿತ್ಸೆಗೆಂದು ಬರುತ್ತಾರೆ. ಅವರಲ್ಲಿ 100ರಿಂದ 140 ಪ್ರಕರಣಗಳು ಎನ್‌ಇಟಿ ಯದ್ದು. ಜಗದ್ವಿಖ್ಯಾತ ಐಟಿ ಕಂಪೆನಿ 'ಆ್ಯಪಲ್' ಸ್ಥಾಪಕ ಸ್ಟೀವ್ ಜಾಬ್ಸ್ ಕೂಡಾ ಇದೇ ರೋಗದಿಂದ ಬಳಲಿದ್ದ. ಆತನಿಗೆ 2003ರಲ್ಲಿ ಎನ್‌ಇಟಿ ಪತ್ತೆಯಾಗಿದ್ದು, 2011ರವರೆಗೆ ಚೆನ್ನಾಗಿಯೇ ಬದುಕಿದ್ದ. ಕಾಯಿಲೆಯ ಹೊರತಾಗಿಯೂ ಆ್ಯಪಲ್ ಕಂಪೆನಿಯ ಚೇರ್‌ಮನ್ ಆಗಿ ವಿಶ್ವದಾದ್ಯಂತ ಓಡಾಟ ನಡೆಸಿದ್ದ. ಸಕಾಲಕ್ಕೆ ಚಿಕಿತ್ಸೆ ಸಿಕ್ಕಿರುವುದರಿಂದ ಇರ್ಫಾನ್ ಈ ಕಾಯಿಲೆಯಿಂದ ಶೀಘ್ರ ಹೊರಬರಲಿದ್ದಾನೆ ಎನ್ನುವುದು ವೈದ್ಯರ ಮಾತು. ವಿದೇಶಕ್ಕೆ ಚಿಕಿತ್ಸೆಗೆ ತೆರಳುವ ಮುನ್ನ ಆತನೂ ಈ ಆಶಾವಾದದ ಮಾತುಗಳನ್ನೇ ಟ್ವೀಟ್ ಮಾಡಿದ್ದಾನೆ.

ಇನ್ನೂ 51ರ ಹರೆಯದ ಸಾಹಬ್‌ಜಾದೆ ಇರ್ಫಾನ್ ಅಲಿ ಖಾನ್, (ಬರ್ತ್‌ಡೇ 7.1.1967) 1988ರಲ್ಲಿ ಆಸ್ಕರ್ ಗೆ ನಾಮಕರಣಗೊಂಡ 'ಸಲಾಂ ಬಾಂಬೆ' ಚಿತ್ರದ ಮೂಲಕ ಬಾಲಿವುಡ್ ಪ್ರವೇಶಿಸಿದವನು. 30 ವರ್ಷಗಳ ಚಿತ್ರಜೀವನದಲ್ಲಿ 50ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದು, ಇಂಗ್ಲಿಷ್ ಸಿನಿಮಾಗಳಲ್ಲೂ ಸಾಕಷ್ಟು ಹೆಸರು ಮಾಡಿದ್ದಾನೆ. ಲೈಫ್ ಆಫ್ ಎ ಮೆಟ್ರೊ, ದಿ ಲಂಚ್ ಬಾಕ್ಸ್, ಹೈದರ್, ಪಿಕು, ಲೈಫ್ ಆಫ್ ಪೈ– ಹೀಗೆ ಈತನ ಸದಾ ನೆನಪಿಗೆ ಬರುವ ಹಲವು ಚಿತ್ರಗಳಿವೆ.

ಕರ್ನಾಟಕಕ್ಕೂ ಇರ್ಫಾನ್‌ಗೂ ಒಂದು ವಿಶಿಷ್ಟ ನಂಟಿದೆ. ಕರ್ನಾಟಕದ ಖ್ಯಾತ ರಂಗಕರ್ಮಿ ಪ್ರಸನ್ನ ಅವರ ಶಿಷ್ಯನೀತ. ದೆಹಲಿಯ ರಾಷ್ಟ್ರೀಯ ನಾಟಕಶಾಲೆಯಲ್ಲಿ ಪ್ರಸನ್ನ ಈತನಿಗೆ ಅಭಿನಯದ ಪಾಠ ಮಾಡಿದ್ದಾರೆ. ಪ್ರಸನ್ನ ಅವರ ಕೈಮಗ್ಗ ಬಟ್ಟೆಯ ಹೋರಾಟ, ಪಾದಯಾತ್ರೆಗಳಲ್ಲೂ ಈತ ಹಲವು ಸಲ ಭಾಗವಹಿಸಿದ್ದಾನೆ. ಮೈಸೂರಿನ ರಂಗಾಯಣಕ್ಕೆ ಈತ ಆಗಾಗ್ಗೆ ಬರುವ ಅತಿಥಿ. ಕನ್ನಡ ರಂಗಭೂಮಿಯ ಬಗ್ಗೆ ವಿಶಿಷ್ಟ ಒಲವನ್ನು ಹೊಂದಿರುವ ಇರ್ಫಾನ್ ಶೀಘ್ರ ಗುಣಮುಖನಾಗಿ ಮರಳಲಿ. ಎನ್‌ಇಟಿ ಆತನನ್ನು 'ಬ್ಲ್ಯಾಕ್‌ಮೇಲ್' ಮಾಡದಿರಲಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65